ಮುಂದಿನ ಮೂರ್ನಾಲ್ಕು ತಿಂಗಳಿನಲ್ಲಿ 400 ಕೋಟಿ ಹಣವನ್ನು ಎತ್ತುತ್ತಿದ್ದೇವೆ. ಒಟ್ಟು 600 ಕೋಟಿ ರೂಪಾಯಿಗಳನ್ನು ಎರಡನೆ ನಿಗಮದಿಂದ ಎತ್ತಿ ಇನ್ನುಳಿದಿರುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ತುಂಗಾ ಮೇಲ್ದಂಡೆ ಯೋಜನೆಯನ್ನು ಕೂಡ ಎರಡನೇ ನಿಗಮಕ್ಕೆ ಬರುತ್ತದೆ, ಇದಕ್ಕೆ ಸಹ ಹಣದ ಕೊರತೆ ಇಲ್ಲ. ನಾವು ಈಗಾಗಲೇ 2100 ಕೋಟಿ ರೂಪಾಯಿಗಳನ್ನು ಮೊದಲ ನಿಗಮದಲ್ಲಿ ಪಡೆದಿದ್ದೇವೆ.. ಮುಂದಿನ ತಿಂಗಳು 200 ಕೋಟಿ ಎತ್ತುತ್ತಿದ್ದೇವೆ. ಬ್ಯಾಂಕುಗಳು 600. ಕೋಟಿ ರೂಪಾಯಿಗಳನ್ನೂ ಇದೇ ತಿಂಗಳಿನಲ್ಲಿ ಹೂಡಲು ಸಿದ್ಧವಾಗಿವೆ. ಆದರೆ ಬಡ್ಡಿ ಆಗುತ್ತದೆಂದು ನಾವೇ ತೆಗೆದುಕೊಳ್ಳುತ್ತಿಲ್ಲ. 450 ಕೋಟಿ ರೂಪಾಯಿಗಳನ್ನು ಸಾರ್ವಜನಿಕರಿಂದ ಎತ್ತಿರುವ ಹಣಕ್ಕೆ ಬಡ್ಡಿ ನೀಡಲು ನಾವು ವ್ಯಯ ಮಾಡುತ್ತಿದ್ದೇವೆ. ನಮ್ಮ ರಾಜ್ಯದ ಪುಣ್ಯಕ್ಕೆ ಬ್ಯಾಂಕುಗಳು ಹಣವನ್ನು ಕೊಡಲಿ ಮುಂದೆ ಬರುತ್ತಿದ್ದಾರೆ. ಆದ್ದರಿಂದ ಹಣದ ಕೊರತೆ ಇಲ್ಲ. ತಾಂತ್ರಿಕ ಸಮಿತಿಯನ್ನು 20ನೇ ತಾರಿಖಿನಲ್ಲಿ ಮಾಡುತ್ತೇವೆ, ಉಳಿದಿರುವ ಕೆಲಸವನ್ನು ಮಾರ್ಚ್ ನಲ್ಲಿ ಪ್ರಾರಂಭ ಮಾಡಿ ಮೇಜರ್ ಕೆಲಸವನ್ನು ಮುಗಿಸಿಕೊಡುತ್ತೇವೆ.

ಶ್ರೀ ಯುಬಿ. ಬಣಕಾರ್ :— 45 ಕೋಟಿ ರೂಪಾಯಿಗಳನ್ನು ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡುತ್ತೀರಿ?

ಶ್ರೀ ಕೆ.ಎನ್. ನಾಗೇಗೌಡ :— ಇದು ಬಜೆಟ್ ಕೆಲಸವಲ್ಲ. ಈಗ ನಿಗಮ ಮಾಡಿದ್ದೇವೆಯ ಕಂಪನಿ ಆಕ್ಟ್‌ನ ಪ್ರಕಾರ ಇದು ಬಜೆಟ್ ವರ್ಕ್ ಅಲ್ಲ. ನಮ್ಮ ಹತ್ತಿರ ಹಣವಿದೆ. ಕೃಷ್ಣ ಭಾಗ್ಯ ನಿಗಮದ ಪ್ರಕಾರ ಹಣವನ್ನು ಮಾಡಿಕೊಡುತ್ತೇವೆ.

(8) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಆರೋಗ್ಯ ಇಲಾಖೆಯಲ್ಲಿ ಔಷಧಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಮಾತಿಗೆ ಮೊದಲು ನಮ್ಮದು ಸ್ಕಾಂಡಲ್ ಫ್ರೀ ಗೌರ್ನಮೆಂಟ್ ಎಂದು ಅವರು ಹೇಳುತ್ತಾರೆ. ಹಗರಣ ಇಲ್ಲದಿರುವ ಸರ್ಕಾರವೆಂದು ಹೇಳುತ್ತೀರಿ. ನಿನ್ನೆ ನಾನು 'ಸ್ಕಾಂಡಲ್' ಎಂದರೆ ಏನು ಎಂದು ಪದಕೋಶವನ್ನು ತೆಗೆದು ನೋಡಿದೆ. ಅದರಲ್ಲಿ ಅಪನಿಂದೆ, ಕಳಂಕ, ಲೋಕೋಪವಾದ, ಹಗರಣ ಎಂದು ಕನ್ನಡದಲ್ಲಿ ಇತ್ತು. ಇಂಗ್ಲಿಷ್‌ನಲ್ಲಿ -Thing that occasion general feeling of outrage of indignation especially as expressed in common talk approbrium. ಎಂದು ಇದೆ. ಈ ಸರ್ಕಾರದಿಂದ ಆಗಿರುವ ಒಂದು ತಾಜಾ ಹಗರಣವನ್ನು ಸಭೆಯ ಮುಂದೆ ಇಡುತ್ತಿದ್ದೇನೆ. ರಾಜ್ಯ

ಸರ್ಕಾರ 6.8 ಕೋಟಿ ಬೆಲೆಯಷ್ಟು ಮನುಷ್ಯರು ಉಪಯೋಗ ಮಾಡುವ ಔಷದಿಗಳನ್ನು ಕೊಂಡುಕೊಂಡಿದ್ದಾರೆ. ಹೋದ ಸಲದ ಅಧಿವೇಶನದಲ್ಲಿ ಪ್ರಾಣಿಗಳ ಔಷದಿಗಳ ವಿಚಾರವನ್ನು ಪ್ರಸ್ತಾಪು ಮಾಡಿದ್ದೆ, ಆವತ್ತು ನಾನು ಏನೇನು ಹೇಳಿದ್ದೆ ಅದೆಲ್ಲವನ್ನು ರುಜುವಾತುಮಾಡಿ ಸಮಿತಿ ವರದಿ ಕೊಟ್ಟಿದೆ. ಇವತ್ತು ಆ ರೀತಿ ಮನುಷ್ಯರ ಔಷದಿಗಳನ್ನು ಕೊಂಡುಕೊಳ್ಳುವಾಗ ಲೋಯಸ್ಟ್ ಬೆಲೆ ಏನಿತ್ತು ಅದಕ್ಕಿಂತ ಐವತ್ತು ಪರ್ಸೆಂಟ್ ಹೆಚ್ಚು ಹಣವನ್ನು ಕೊಟ್ಟು ಕೊಂಡು ಕೊಂಡಿದ್ದಾರೆ. 19-1-1999 ರಂದು Directorate of Health and Family Welfare had approved the tenders.. ಆ ಟೆಂಡರ್‌ಗೆ ಒಪ್ಪಿಗೆ ನೀಡಿದಾಗ ತಮ್ಮ ನಿಯಮ, ನೀತಿ, ಕಾನೂನುಗಳೇನಿದೆ ಅವೆಲ್ಲವನ್ನು ಗಾಳಿಗೆ ತೂರಿ ಯಾರೋ ಔಷಧಿಗಳ ಉತ್ಪಾದಕರಿಗೆ ಸಹಾಯ ಮಾಡುವ ದೃಷ್ಟಿಯಿಂದ ರಾಜ್ಯದ ನಾಗರೀಕರ ಬಗ್ಗೆ ಕಳಕಳಿ ಇಲ್ಲದೆ ದೊಡ್ಡ ಹಗರಣವನ್ನು ಮಾಡಿದ್ದಾರೆ 19-1-1999 ರಂದು ಆ ರೀತಿ ಟೆಂಡರ್‌ಗೆ ಒಪ್ಪಿಗೆ ನೀಡುವಾಗ 25 types of pharmaceuticals have been approved at rates higher than lowest rates quoted in the bidding. ಬಿಡ್ಡಿಂಗ್‌ಗೆ ಯಾರ್ಯಾರು ಟೆಂಡರರ್ಸ್ ಬಂದಿದ್ದರು ಅವರು ನಮೂದು ಮಾಡಿದ್ದ ಲೋಯಸ್ಟ್ ರೇಟ್‌ಗಿಂತ ಐವತ್ತು, ಎಪತ್ತೈದು ಪರ್‌ಸೆಂಟ್ ಹೆಚ್ಚು ದರಕ್ಕೆ ಟೆಂಡರ್‌ನ್ನು ತಾವು ಅಪ್ರೂವ್ ಮಾಡಿದ್ದೀರಿ. ನಾನು ಇದಕ್ಕೆ ಸಂಬಂಧಪಟ್ಟಂತೆ ಎರಡೇ ಎರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಮೊದಲನೆಯದು ಟೆಟ್ರಾಸೈಕ್ಲಿನ್ ಕ್ಯಾಪ್ಸೂಲ್. ಸಭಾಧ್ಯಕ್ಷರೆ, ಇದು ಆಂಟಿ ಬಯಾಟಿಕ್ 3,000 ಸ್ಟ್ರಿಪ್ಸ್ ಆಫ್ 1000 ಕ್ಯಾಪ್ಸೂಲ್ಸ್. ಟೆಂಡರ್ ಅವಾರ್ಡ್ ಮಾಡಿರುವುದು ರೂ. 840.10 ಪೈಸೆ ಫಾರ್ 1000 ಕ್ಯಾಪ್ಸೂಲ್ಸ್ ಲೋಯೆಸ್ಟ ಬಿಡ್ಡಿಂಗ್ ಇದ್ದುದು 41 ಪೈಸೆ ನೀವು ಕೊಟ್ಟಿರುವುದು 84 ಪೈಸೆಗೆ. ಲೋಯೆಸ್ಟ್ ರೇಟ್ ಇರುವುದು ನೀವು ಹೇಳಿದಂತೆ 41 ಪೈಸೆ ಸೇಮ್ ಕೆಪ್ಯಾಸಿಟಿ. ಇದರಿಂ ಏನಾಯಿತೆಂದರೆ, ಹನ್ನೆರಡುವರೆ ಲಕ್ಷ ರೂಪಾಯಿಗಳಷ್ಟು ಹಣವನ್ನು ಎಕ್ಸೆಸ್ ಆಗಿ ಕೊಟ್ಟಿದ್ದೀರಿ. ಅನಂತರ ಪೆನ್ಸಿಲಿನ್ ಬಿನ್‌ಜಿಲ್, ಇದೂ ಕೂಡ ಆಂಟಿ ಬಯಾಟಿಕ್ ತಾನೆ? ಮೂರು ಲಕ್ಷ ಯೂನಿಟ್‌ಗಳನ್ನು ಪರ್ಚೇಸ್ ಮಾಡಿರುವುದಕ್ಕೆ ಆರ್ಡರ್ ಪ್ಲೇಸ್ ಮಾಡಲಾಗಿದೆ. ಅವಾರ್ಡ್ ಮಾಡಿರುವುದು ಪರ್ ವಯಲ್ ರೂ.3.96 ಪೈಸೆ. ಲೋಯೆಸ್ಟ್ ರೇಟ್ ಇದ್ದುದು 2.69 ಪೈಸೆ ರೂ 2.69 ಪೈಸೆ ಇರುವುದಕ್ಕೆ ನೀವು ರೂಯ 3.96 ಪೈಸೆ ಕೋಟ್ಯು ಮೂರು ಲಕ್ಷ ಯೂನಿಟ್‌ಗಳನ್ನು ಪರ್ಚೇಸ್ ಮಾಡುವುದಕ್ಕೆ ಆರ್ಡರ್ ಕೊಟ್ಟಿದ್ದೀರಿ. ರೂ.419 ಗಳಿರುವ ಕಡೆ ರೂ 840 ಕೊಟ್ಟು 3,000 ಸ್ಟ್ರಿಪ್ಸ್ ತೆಗೆದುಕೊಳ್ಳುವುದಕ್ಕೆ ಅವಾರ್ಡ್ ಮಾಡಿದ್ದೀರಿ. ಬಹಳ ಮುಖ್ಯವಾದುದೇನೆಂದರೆ, ಗೌರ್ನಮೆಂಟ್ ಆರ್ಡರ್ ನಂ. ಹೆಚ್‌ಎಫ್‌ಡಬ್ಲೂ 29 ಹೆಚ್‌ಪಿಸಿ 98 ಬೆಂಗಳೂರು, ದಿನಾಂಕ 18.3.98 ಇದು ಗೆಜೆಟ್‌ನಲ್ಲಿ ಪ್ರಕಟವಾಗಿದ್ದು. ಇದರಲ್ಲಿ ಪ್ರಿಯಾಂಬಲ್ ಬಹಳಷ್ಟಿದೆ. I quote Government Order dated 18-3-98.

'The Hathi Committee constituted by the Government of India recommended establishment of a separate company under the Companies Act, 1956 in each State so that the Government could get quality drugs for its hospitals from its own Company.

Accordingly, M/s. Karnnataka Antibiotic and Pharmaceuticals Ltd., was established as a Joint venture between Government of Karnataka and M/s. Hindustan Antibiotics Ltd., a Government of India Sector Unit. The Government of Karnnataka has 42 stake in it.. ಆದು ನಮ್ಮದೇ ಕಂಪನಿಯಾಗಿದ್ದು, ನಮ್ಮದೇ ಶೇಕಡಾ 42ರಷ್ಟು ಸ್ಟೇಕ್ ಇದ್ದು ಅದರಲ್ಲಿಯೇ ಎಲ್ಲಾ ಮಾಡಬೇಕು. ಆ ಆಧಾರದ ಮೇಲೆ 18.3.98ರ ಆರ್ಡರ್, In the circumstances mentioned above, the Government are pleased to approve the purchase of products manufactured by M/s. Karnataka Antibiotics and Pharmaceuticals Limited Bangalore, on a first priority basis in respect of Injectable and non-Injectable as fas as antibiotics including Anti-tubercular drugs ae concerned. The price each item should not exceed 77% of the ceilling price fixed by the G.O.I.. ಇದನ್ನು ತೆಗೆದುಕೊಳ್ಳಬೇಕಾಯಿತು. ಒಂದು ಕಂಡಿಷನ್ ಏನಿತ್ತು ಎಂದರೆ, lowest tender ನಾನು ಅದನ್ನೂ ಕೂಡ ಇವತ್ತು ಬೆಳಿಗೆ ತಂದಿದ್ದೇನೆ. ಮೊದಲನೆಯದು ನಮ್ಮದೇ ಸರ್ಕಾರದ ಆದೇಶವನ್ನು ಉಲಂಘಿಸಿ, ನಮ್ಮದೇ ಸಂಸ್ಥೆಯಲ್ಲಿ ಲಭ್ಯವಿದ್ದರೂ ಮತ್ತು ಅದು ಆಂಟಿ ಬಯಾಟಿಕ್ ಆಗಿದ್ದರೂ ಸಹ ತೆಗೆದುಕೊಳ್ಳದೆ ಲೋಯಸ್ಟ್ ಟೆಂಡರ್ ಗಿಂತ ಶೇಕಡಾ 50, ಶೇಕಡಾ 70 ರಷ್ಟು ಮೇಲ್ಪಟ್ಟು ದರ ಹಾಕಿ ಅದನ್ನು ತೆಗೆದುಕೊಂಡು. ಇವೋತ್ತು ನಮ್ಮ ಆಸ್ಪತ್ರೆಗಳಿಗೆ ರಾಜ್ಯದ ನಾಗರೀಕರಾದ ಯಾವ ಬಡ ರೋಗಿಗಳು ಬರುತ್ತಾರೆ. ಅವರಿಗೆ ದ್ರೋಹ ಬಗೆಯುವಂಥ. ರಾಜ್ಯದ ಖಜಾನೆ ಲೂಟಿ ಮಾಡುವಂಥ ಒಂದು ಹರರಣ ನಡೆದಿದೆ. ಅಧ್ಯಕ್ಷರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುವುದಿಷ್ಟೆ It is clear case of open aggression, naked aggression- ಇದನ್ನೂ ಕೂಡ ನೀವು ಹಗರಣ ಎನ್ನದಿದ್ದರೆ ಇನ್ಯಾವುದನ್ನು ಹಗರಣ ಎನ್ನುತ್ತಿರೋ ಗೊತ್ತಿಲ್ಲ. ನಮ್ಮ ಕಣ್ಮುಂದೆಯೇ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಹಗರಣ ನಡೆದಿರುವಾಗ ಜೊತೆಗೆ ಇದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಕೊಡುತ್ತಿರುವಾಗ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಇದರ ಬಗ್ಗೆ ಎನ್‌ಕ್ವೋರಿ ಮಾಡಲು ಆಯೋಗವೇನೂ ಬೇಡ. ನಾವು ದಿನಾಂಕ 19.1.00 ರಂದು ಆರ್ಡರ್

ಹೊರಡಿಸುವ ಮೂಲಕ ಟೆಂಡರ್ ಮಾಡಿದ್ದೀರಿ, ಅದನ್ನು ಕೂಡಲೇ ರದ್ದು ಮಾಡಿ, ಯಾರು ಇದಕ್ಕೆ ಕಾರಣ ಪುರುಷರಾಗಿದ್ದಾರೆ, ಅವರು ಎಂತಹ ಪ್ರಭಾವಿಗಳೇ ಇದ್ದರೂ ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರೆಂಬ ಬಗ್ಗೆ ಉತ್ತರ ಕೊಡಬೇಕು.

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :— ದಿನಾಂಕ 19.1.99ರ ಆಜ್ಞೆಯನ್ನೂ ಹಿಂತೆಗೆದುಕೊಳ್ಳುವುದಿಲ್ಲ. ನಾವು ಹೇಳಿರುವ ವಿಚಾರ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ನೋಡಿದ್ದೇನೆ. ನೀವು ಹೇಳಿರುವುದನ್ನು ವಿಚಾರಣೆ ಮಾಡಿ ಸರ್ಕಾರದ ವತಿಯಿಂದ ಕೂಲಹಕಷವಾದ ಉತ್ತರವನ್ನು ನಿಮಗೆ ಕೊಡಬೇಕು. ನಾವು ಆ ಉತ್ತರವನ್ನು ಸರ್ಕಾರದ ವತಿಯಿಂದ ಕೊಡುತ್ತೇವೆ. ಉತ್ತರ ಕೊಟ್ಟಂಥ ಸಂದರ್ಭದಲ್ಲಿ ನೀವು ಆ ಕುರಿತು ಹೇಳುವುದೇನಾದರೂ ಇದ್ದರೆ ಅದನ್ನೂ ಗಮನಿಸುತ್ತೇವೆ. ನಾವು ಸೋಮವಾರ ದಿವಸ ಸರ್ಕಾರದ ವತಿಯಿಂದ ಹೇಳಿಕೆ ಕೊಡುತ್ತೇವೆ. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಒಂದು ವಿಚಾರವನ್ನು ಗಮನಕ್ಕೆ ತರಬಯಸುತ್ತೇನೆ. Tetracyclin is a very powerful anticiotics - 250 mg, the lowest price is 44 paise and this tetracycline is available for less than one rupee. there are so many fake companies, pharmaccuticals in Bangalore and one person having 15-20 such companies running in Bangalore. Therefore Government ultimately, ಅಂತಹ ಕಂಪನಿಗಳನ್ನು ಎಲಿಮಿನೇಟ್ ಮಾಡಬೇಕೆಂದು ತೀರ್ಮಾನಿಸಿ the Government as a matter of principle decided to purchase quality drugs by paying higher prices from reputed companies. That is also one of the principles we have adopted. But, with al;l that let me go through the whole file and come forward with a statement; and thereafter, if they want to speak, let them speak.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಹಿರಿಯ ಸಚಿವರಾದ ಮಾನ್ಯ ನಾಣಯ್ಯನವರು ಮಾತನಾಡುತ್ತಾ ನಾನು ಆ ಕುರಿತು ಫೈಲ್ ನೋಡಿಲ್ಲ, ಸ್ಟಡಿ ಮಾಡಿಲ್ಲ. ಅದರ ಬಗ್ಗೆ ನನಗೇನೂ ಗೊತ್ತಿಲ್ಲವೆಂದು ಹೇಳಿದರು. ಆದರೆ, ಪತ್ರಿಕೆಗಳಲ್ಲ ವರದಿಯಾಗಿರುವುದನ್ನು ಮಾತ್ರ ನೋಡಿಕೊಂಡು ಹೇಳಿದ ನಂತರ ತಾವೇನು ಹೇಳಿದಿರಿ ಅವರನ್ನು ಅಮಾನತ್ತಿನಲ್ಲಿಡುವ ಪ್ರಶ್ನೆಯೇ ಬರುವುದಿಲ್ಲ ಮತ್ತು ಪರ್ಚೇಸ್ ಮಾಡಿರುವ ಆರ್ಡರ್ ಅನ್ನೂ ಸಹ ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲವೆಂದಿರಿ. ಅಂದರೆ ಇದರ ಅರ್ಥ ಏನು?. ಮಾನ್ಯ ಸದಸ್ಯರ ಬಳಿ ಆ ಬಗೆಗಿನ ಮಾಹಿತಿ ಇದ್ದು ಹೇಳಿದಾಗ ಕನಿಷ್ಠ ಪಕ್ಷ ಆ ಕುರಿತು ನಾನು

ನೋಡಿಕೊಂಡು ಹೇಳುತ್ತೇನೆ ಎಂದಿದ್ದರೆ ಸರಿಯಿರುತ್ತಿತ್ತು. ಆದರೆ, ಈಗ ಏನೂ ಮಾಡುವುದಿಲ್ಲ, ಅದರ ಆರ್ಡರ್ ಅನ್ನೂ ವಾಪಸ್ಸು ತೆಗೆದುಕೊಳ್ಳುವುದಿಲ್ಲ ಎಂದರೆ ಏನರ್ಥ? ಅಂದರೆ already made up your mind to support them. Then, this Karnataka Antibiotics Company, will you close that Company?

ಶ್ರೀ ಎಂ.ಸಿ. ನಾಣಯ್ಯ :— ನಾನು ನೇರವಾಗಿ ಹೇಳಿದ್ದೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ, ಇದು ಓಪನ್ ಏಗ್ರೆಷನ್, ನೇಕೆಡ್ ಅಗ್ರೆಷನ್ ಆಗಿದ್ದು, ಆದುದರಿಂದ 19.1.99ರ ಆಜ್ಞೆಯನ್ನು ಹಿಂತೆಗೆದುಕೊಂಡು ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿದಾಗ, ಅದಕ್ಕೆ ನಾನು ಪ್ರತಿಕ್ರಿಯಿಸುತ್ತಾ ಈಗ ಅದನ್ನು ಮಾಡುವುದಿಲ್ಲ, ಸರ್ಕಾರದ ವತಿಯಿಂದ ನಾವು ಹಮ್ಮಿಕೊಂಡಿರುವ ಕಾರ್ಯಕ್ರಮ ಹಾಗೂ ಈ ದಿಶೆಯಲ್ಲಿ ತೆಗೆದುಕೊಂಡಿರುವ ಕ್ರಮಗಳೇನು ಎಂಬ ಬಗ್ಗೆ ಕೂಲಂಕಷವಾದ ವರದಿಯನ್ನು ಸದನದಲ್ಲಿಡುತ್ತೇನೆಂದು ಹೇಳಿದೆ. ಸರ್ಕಾರ ಸಮರ್ಥನೆ ಮಾಡಿಕೊಳ್ಳಬೇಕಾಗುತ್ತದೆ. ಬಹುಶಃ ಅದರಲ್ಲೇನಾದರೂ ಲೋಪವಿದ್ದಂಥ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಂದಾಗ ಸರ್ಕಾರ ಖಂಡಿತವಾಗಿಯೂ ಅದಕ್ಕೆ ಸ್ಪಂದಿಸಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಇಲ್ಲಿ ಪ್ರಶ್ನೆ ಬಂದಿರುವೇದೆನೆಂದರೆ, ಕ್ವಾಲಿಟಿ ಆಫ್ ಪ್ರಾಡಕ್ಟ್ ಅನ್ನು ತೆಗೆದುಕೊಳ್ಳಬೇಕೆನ್ನುವ ಅಂಶದಿಂದ ಟೆಂಡರ್ ವ್ಯವಸ್ಥೆ ಬಗ್ಗೆ ತಾವು ಈ ರೀತಿಯ ಮಾತನ್ನು ಹೇಳುವಂಥ ಸ್ಥಿತಿಗೆ ಬಂದಿದ್ದೀರಿ. ಹಾಗಾದರೆ, ಕೆ.ಎ.ಪಿ.ಎಲ್. ಅನ್ನು ಸರಿಯಲ್ಲವೆಂದು ತೀರ್ಮಾನಿಸಿ ಅದನ್ನು ಮುಚ್ಚಿಬಿಡಿ. ಇಲ್ಲಿ ಏನಾಗುತ್ತದೆಂದರೆ, ಈ ರೀತಿಯಾದ ಹಗರಣ ನಡೆದಿರುವಂಥ ಸಂದರ್ಭದಲ್ಲಿ, ಇದನ್ನು ಮುಚ್ಚುವಂಥ ಪ್ರಯತ್ನವಿದೆಯೆಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಸ್ಪಷ್ಟವಾಗಿ ಗೆಜೆಟ್ ನೋಟಿಫಿಕೇಷನ್ ಅನ್ನು ಮೆನ್‌ಷನ್ ಮಾಡುತ್ತಿದ್ದಾರೆ ಮತ್ತು ಕಂಪನಿಯ ಹೆಸರನ್ನೂ ಸಹ ಹೇಳುತ್ತಿದ್ದು, ಮತ್ತು ರೇಟ್‌ನಲ್ಲಿ ವ್ಯತ್ಯಾಸವಾಗಿರುವುದನ್ನು ನಿಮ್ಮ ಗಮನಕ್ಕೆ ತಂದಾಗ ಇಷ್ಟು ಧೈರ್ಯವಾಗಿನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಮಾತನ್ನು ಹೇಳಬಾರದಿತ್ತು. ಬದಲಿಗೆ ಒಂದು ಸ್ಪಷ್ಟವಾದ ಹೇಳಿಕೆ ಕೊಟ್ಟು ಅದರ ಮೇಲೆ ಚರ್ಚಿಸಿದ್ದರೆ ಚೆನ್ನಾಗಿತ್ತು. ಇವೊತ್ತು ಯಾರು ಈ ಕೆಲಸ ಮಾಡಿದ್ದಾರೋ, ಅವರಿಗೆ ಪರೋಕ್ಷವಾಗಿ ಬೆಂಬಲ ಕೊಟ್ಟಂತಾಯಿತು.

SRI M.C. NANAIAH: Iam not prepared to accept the allegations made by the hon. Member against the Government just now and I am not prepared to accept it. As far as Government is concerned I must say we have not committed any irregularities. ಹಿಂದೆ

ಪಶುವೈದ್ಯಕೀಯ ಇಲಾಖೆಗೆ ಸಂಬಂಧಿಸಿದಂತೆ ಚರ್ಚೆಯಾಯಿತು, ನಂತರ ಯಾವುದೋ ಒಂದು ಸಮಿತಿಗೆ ವಿಷಯವನ್ನು ಒಪ್ಪಿಸಬೇಕೆಂದಾಯಿತು. ಅದರ ಬಗ್ಗೆ ತೀರ್ಮಾನಿಸಿ ವರದಿಯೂ ಸಹ ಬಂದಿದೆ. ಆದರೆ, ಈ ಸಂದರ್ಭದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮ ಯಾವುದಿದೆ, ನೀವು ಹೇಳುತ್ತಿರುವ ಕೆಲವು ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿರಬಹುದು ಮತ್ತು ಕೆಲವು ಆಜ್ಞೆಗಳನ್ನು ಸಹ ತೋರಿಸಿದ್ದೀರಿ. ಓಪನ್ ಅಗ್ರೆಷನ್ ಎಂದು ಹೇಳುತ್ತಿರುವ ನಿಮ್ಮ .ಹತ್ತಿರ ದಾಖಲೆಗಳೇನಿವೆ, ಅದರ ಬಗ್ಗೆ ಸರ್ಕಾರದ ವತಿಯಿಂದ ಹೇಳಿಕೆ ಕೊಡುತ್ತೇವೆ. ಹೇಳಿಕೆ ಕೊಟ್ಟು ನಂತರ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್‌ಕುಮಾರ್:— ತಾವು ಮಾತನಾಡುತ್ತಾ as a matter of principle ಎಂದು ಹೇಳಿದಿರಿ. ಆದರೆ, the principle cannot be selective. ಇದೇ ರೀತಿ ಪಶುಸಂಗೋಪನಾ ಇಲಾಖೆಗೆ ಸಂಬಂಧಿಸಿದಂತೆ ಫ್ಯಾಕ್ಷರಿಗಳಿಗೆಲ್ಲಾ ಹೋದಾಗ ಅಲ್ಲಿ ಕಾಲಿಡುವಂಥ ಪರಿಸ್ಥಿತಿ ಇಲ್ಲದಿರುವಂತಹ ಫ್ಯಾಕ್ಟರಿಗಳಿಂದ ನೀವು ತೆಗೆದುಕೊಳ್ಳುತ್ತಿದ್ದೀರಿ. ನಾನು ಒಂದು ಉದಾಹರಣೆಯನ್ನು ಕೋಟ್ ಮಾಡಿದೆ. ರೂ. 490.00ಗಳಿಗೆ ಸಿಗುವುದನ್ನೇ ತೆಗೆದುಕೊಳ್ಳಿ. ನಾವು ಯಾವುದೋ ಕಂಪನಿಗೆ ಅಡ್ವೊಕೇಟ್ ಮಾಡುವುದಕ್ಕೆ ಇಲ್ಲಿ ಬಂದಿಲ್ಲ. ಏಕೆಂದರೆ, ನಾಣಯ್ಯನವರೇ, ತಾವು ಹಿರಿಯ ಸಂಸದೀಯ ಪಟುವಾಗಿದ್ದು ತಾವು ವಿಧಾನ ಪರಿಷತ್ತಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ನಿಮ್ಮ ಕಾರ್ಯವೈಖರಿಯನ್ನು ನೋಡಿ ಮೆಚ್ಚಿದವರಲ್ಲಿ ನಾನು ಒಬ್ಬನಾಗಿದ್ದೇನೆ. ಯಾವುದೇ ರೀತಿಯಾದ ಅನ್ಯಾಯಗಳು ನಿಮ್ಮ ಗಮನಕ್ಕೆ ಬಂದಾಗ ಆಗ ಎಷ್ಟು ಉಗ್ರವಾಗಿ ಮಾತನಾಡುತ್ತಿದ್ದೀರೆಂಬುದನ್ನು ನಾನು ನೋಡಿದ್ದೇನೆ. Your position has changed but your principle should not change. ನಾನು ಏನೋ ಒಂದು ಹೇಳಿದಾಗ,I will not accept ಎಂದರೆ ಏನರ್ಥ? I will look into it ಎಂದು ಹೇಳಿ How can you say that?

7.40 ಪಿ.ಎಂ.

SRI M.C. NANAIAH: As of now, as at the moment, I am not ready. If you want me to do a thing straight-away, I said ``No''. I will not do that.

SRI S. SURESH KUMAR: There is a way to say those things.

SRI M.C. NANAIAH: Naked aggression ಎಂದು ನೀವು ಹೇಳತಕ್ಕ ಸಂದರ್ಭದಲ್ಲಿ.

MR. SPEAKER: Hon'ble parliamentary Affairs Minister, I must be fair to Mr. Suresh Kumar. ಅವರೇನು ಈಗಲೇ ಕ್ರಮ ತೆಗೆದುಕೊಳ್ಳಿ ಎಂದು ಹೇಳಲಿಲ್ಲ, He has placed whatever information he had with him. ಹೇಳಿದ್ದಾರೆ. ತಾವು ಕೂಡ ಒಂದೇ ಸಲ ಅದನ್ನು ಡಿಸ್ಮೆ ಮಾಡಿಬಿಡಿವುದಕ್ಕಿಂತ ಸೋಮವಾರದ ವರೆಗೆ ಸಮಯ ತೆಗೆದುಕೊಳ್ಳಿ. ಮಾನ್ಯ ಸುರೇಶ್ ಕುಮಾರ್ ರವರೇ, ತಾವು ಹೇಳುವುದನ್ನೆಲ್ಲಾ ಹೇಳಿದ್ದೀರಿ; ಈಗ ಉತ್ತರ ಹೇಳುವವರ ಮೇಲೆಯೇ ಜವಾಬ್ದಾರಿ ಇದೆ. ಇದೆಲ್ಲಾ ನಾಳೆ ಪ್ರಚಾರವಾಗುತ್ತದೆ. ಅವರು ಈಗ ಕಳಂಕದಿಂದ ಹೊರಕ್ಕೆ ಬರಬೇಕಾದರೆ ಅದಷ್ಟು ಬೇಗ ಸತ್ಯವೇನಿದೆ ಅದನ್ನು ಹೇಳಿ ಸಮರ್ಥನೆ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾವು ಕ್ವಾಲಿಟಿ ಕಂಪನಿಗಳಿಂದ ತೆಗೆದುಕೊಳ್ಳುತ್ತಿದ್ದೇವೆ; ಟೆಂಡರ್ ಪ್ರಶ್ನೆ ಎಲ್ಲಿ ಬಂತು ಎಂದು ಇವರು ಹೇಳಿಬಿಟ್ಟರೆ ಆ ಕಂಪನಿಗಳನ್ನು ಇವರು ಡಿಫಂಡ್ ಮಾಡಿಕೊಂಡಂತೆ ಆಗುವುದಿಲ್ಲವೆ?

ಅಧ್ಯಕ್ಷರು :— ಹಾಗೆ ಹೇಳಿದ ಮಾತ್ರಕ್ಕೆ ಸಮರ್ಥನೆಯಾಗುವುದಿಲ್ಲ. ಅವರು ಅದನ್ನು ನಾಳೆ ದಾಖಲೆಗಳ ಮೂಲಕ ಸಮರ್ಥಿಸಿಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಅದು ಹೇಳಿದ್ದರೆಚೆನ್ನಾಗಿರುತ್ತಿತ್ತು. ಈಗ ಆ ಕಳ್ಳ ಕಂಪನಿಗೆ ಸಪೋರ್ಟ್ ಮಾಡಿಬಿಟ್ಟರಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಹೇಳುವ ಧಾಟಿ ನೋಡಿದರೆ ಎಲ್ಲವೂ ಅವರಿಗೆ ಗೊತ್ತಿದೆ. ಅವರು ಉತ್ತರ ಕೊಡುತ್ತಾ ಮೊದಲ ವಾಕ್ಯದಲ್ಲೇ ನಾನು ಇದನ್ನು ವಾಪಸ್ ತೆಗೆದುಕೊಳ್ಳುವುದಿಲ್ಲ, ಅವರನ್ನು ಸಸ್ಪೆಂಡ್ ಮಾಡುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ :— ಸರ್ಕಾರದ ಪರವಾಗಿ ಉತ್ತರವನ್ನು ಕೊಡುವಾಗ ನಾನು ಬಹಳ ಜವಾಬ್ದಾರಿಯಿಂದ ಹೇಳಿದ್ದೇನೆ. ತಾವು ಮಾಡಿರುವ ಅಲಿಗೇಷನ್ ಗಳು ಯಾವುದಿದೆ ಅದನ್ನು ಈ ಸಮಯದಲ್ಲಿ ಒಪ್ಪಿಕೊಳ್ಳಲು ಆಗುವುದಿಲ್ಲ. ಸೋಮವಾರ ಇದರ ಬಗ್ಗೆ ಉತ್ತರ ಕೊಡುವಾಗ ತಮಗೆ ಅಗತ್ಯವಿರುವ ಎಲ್ಲಾ ಮಾಹಿತಿ ನೀಡುತ್ತೇನೆ. ಅನಂತರ ಬೇಕಾದರೆ ತಾವು ತಮ್ಮ ಅನಿಸಿಕೆಗಳನ್ನು ಹೇಳಿ. ಅಲ್ಲಿಯವರೆಗೆ ನಾನು ಇದನ್ನು ಒಪ್ಪಿಕೊಳ್ಳಲು ಆಗುವುದಿಲ್ಲ.